






# ಸುರ ಸುಂದರಿ, ಕರ ಕಿಂದರಿ!

ಎಲ್ಲರ ನಾಲಗೆಯ ಮೇಲೂ ಪ್ರಿಯಾಂಕಾ ಚೋಪ್ರಾ ಹೆಸರು!

ಹೊಸ ವರ್ಷದ ಮೊದಲ ತಿಂಗಳಿಡೀ ಪ್ರಿಯಾಂಕಾಳದ್ದೇ ಸುದ್ದಿ. ಹೊಸ ವರ್ಷದ ಪಾರ್ಟಿಗೆ ಡಿಸೆಂಬರ್ 31ರ ರಾತ್ರಿ ಡ್ಯಾನ್ಸ್ ಮಾಡಲು ಸಂಘಟನೆಯೊಂದು ಕರೆದರೆ ಪ್ರಿಯಾಂಕಾ ಒಲ್ಲೆ ಎಂದಳಂತೆ. ಆಮೇಲೆ ನೋಡಿದರೆ ಪ್ರಿಯಾಂಕಾ ತನ್ನ ಹಳೆಯ ಗೆಳೆಯ ಶಾಹಿದ್ ಕಪೂರ್ ಜತೆ ಹೊಸ ವರ್ಷಾಚರಣೆ ಮಾಡಲು ಹೊರಟಿದ್ದಳು ಎಂದು ಗೊತ್ತಾಯಿತು. ಕಳೆದ ವರ್ಷವಿಡೀ ಜಗಳವಾಡಿದ ಪ್ರಿಯಾಂಕಾ ಮತ್ತು ಕರೀನಾ ಪರಸ್ಪರರನ್ನು ಸಮಾರಂಭವೊಂದರಲ್ಲಿ ತಬ್ಬಿ ರಾಜಿಯಾದದ್ದು ಎರಡನೇ ಸುದ್ದಿ.

ಆ ಬಳಿಕ ಫಿಲಂಫೇರ್ ಪ್ರಶಸ್ತಿ ಸಮಾರಂಭದಲ್ಲಿ ಪ್ರಿಯಾಂಕಾ ಧರಿಸಿದ ಮಿನಿ ಉಡುಗೆ ಭಾರೀ ಸುದ್ದಿಯಾಯಿತು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಲ್ಲರೂ ಪ್ರಿಯಾಂಕಾಳನ್ನು ಹೊಗಳಿದ್ದೇ ಹೊಗಳಿದ್ದು! ಈ ಮಧ್ಯೆ ಅಮಿತಾಭ್ ಬಹಳ ಹಿಂದೆ ನಟಿಸಿದ್ದ 'ಅಗ್ನಿಪಥ್' ಚಿತ್ರದ ರಿಮೇಕ್‌ನಲ್ಲಿ ಪ್ರಿಯಾಂಕಾ ನಾಯಕಿಯಾಗಿ ಆಯ್ಕೆಯಾದದ್ದೂ, ಹೀರೋ ಹೃತಿಕ್ ಜತೆ ರೋಮಾಂಚಕ ದೃಶ್ಯಗಳಲ್ಲಿ ಭಾಗವಹಿಸಿದ್ದೂ ದೊಡ್ಡ ಸುದ್ದಿಯಾಯಿತು. ಎಲ್ಲ ಪತ್ರಿಕೆಗಳಲ್ಲಿ ಅವಳದ್ದೇ ಫೋಟೊ.

ಅದೆಲ್ಲಕ್ಕಿಂತ ದೊಡ್ಡ ಸುದ್ದಿ ಕಳೆದ ವಾರದ್ದು. ಒಂದು ಬೆಳ್ಳಂಬೆಳಿಗ್ಗೆ ಆದಾಯ ತೆರಿಗೆ ಅಧಿಕಾರಿಗಳು ಪ್ರಿಯಾಂಕಾ ಮತ್ತು ಆಕೆಯ ತಂದೆ ಡಾ.ಅಶೋಕ್ ಚೋಪ್ರಾ ಮನೆಗೆ ದಾಳಿ ನಡೆಸಿದರು. ಬೆಳಿಗ್ಗೆ ಏಳೂ ಮುವ್ವತ್ತಕ್ಕೆ ಮುಂಬೈಯ ಯಾರಿ ರಸ್ತೆಯಲ್ಲಿರುವ ಪ್ರಿಯಾಂಕಾ ಮನೆಗೆ ಹೋದ ಅಧಿಕಾರಿಗಳು ಬಾಗಿಲು ತಟ್ಟಿದಾಗ ಬಾಗಿಲು ತೆರೆದಾತ ಶಾಹಿದ್ ಕಪೂರ್! ಅದೂ ಬರೀ ದೊಗಳೆ ಚಡ್ಡಿಯಲ್ಲಿ ಆತ ನಿಂತಿದ್ದನ್ನು ಕಂಡು ಆದಾಯ ತೆರಿಗೆ ಅಧಿಕಾರಿಗಳಿಗೆ ಅಚ್ಚರಿಯೋ ಅಚ್ಚರಿ!

ಪ್ರಿಯಾಂಕಾ ಮನೆ ಎಂದರೆ ಅರಮನೆಯೇ. ಒಟ್ಟು ಐದು ಫ್ಲಾಟ್‌ಗಳನ್ನು ಒಟ್ಟು ಸೇರಿಸಿ ಒಂದೇ ಮನೆ ಮಾಡಲಾಗಿದೆ. ಮನೆಯೊಳಗೆ 12 ಲಾಕರ್‌ಗಳನ್ನು ಪತ್ತೆ ಹಚ್ಚಿರುವ ಅಧಿಕಾರಿಗಳು ಎಲ್ಲವನ್ನೂ ಸೀಲ್ ಮಾಡಿದ್ದಾರೆ. ಬೆಳಿಗ್ಗೆ ಮನೆಗೆ ಬಂದ ಅಧಿಕಾರಿಗಳು ಸಂಜೆಯವರೆಗೂ ದಾಖಲೆಗಳನ್ನು ಪರಿಶೀಲಿಸಿದ್ದಾರೆ. 2–3 ಚೀಲಗಳಲ್ಲಿ ದಾಖಲೆಗಳನ್ನು ಕೊಂಡೊಯ್ದಿದ್ದಾರೆ.

ತಮಾಷೆ ಅದಲ್ಲ– ಇದೇ ಪ್ರಿಯಾಂಕಾ ಕಳೆದ ವರ್ಷ ಕೇಂದ್ರ ಸರಕಾರಕ್ಕಾಗಿ ಸಾಕ್ಷ್ಯ ಚಿತ್ರವೊಂದರಲ್ಲಿ ನಟಿಸಿದ್ದಳು. 'ಎಲ್ಲರೂ ಸಮಯಕ್ಕೆ ಸರಿಯಾಗಿ ಆದಾಯ ತೆರಿಗೆ ಪಾವತಿಸಿ; ಯಾರೂ ತೆರಿಗೆ ತಪ್ಪಿಸಬೇಡಿ' ಎಂದು ಸಾರುವ ಆ ಸಾಕ್ಷ್ಯಚಿತ್ರದಲ್ಲಿ ಮಾಡೆಲ್ ಆಗಿ ಮಿಂಚಿದ್ದು ಇದೇ ಪ್ರಿಯಾಂಕಾ. ಈಗ ನೋಡಿದರೆ, ಅಧಿಕಾರಿಗಳೇ ತೆರಿಗೆ ತಪ್ಪಿಸಿ ಕೂಡಿಟ್ಟ ಗಂಟುಗಳ ಸಾಕ್ಷ್ಯ ಎತ್ತಿಕೊಂಡು ಹೋಗಿದ್ದಾರೆ!

ಹೊರಗೆ ಥಳಕು; ಒಳಗೆ ಹುಳುಕು.. ಎಂದರೆ ಇದೇ ಇರಬಹುದೆ?

■ ಬಿಂದು